(ಆ) ಹೌದು

(ಇ) ಹೌದು

**ಶ್ರೀ ಸಿ. ಎಂ. ಉದಾಸಿ.**—ಮಾನ್ಯ ಅಧ್ಯಕ್ಷರೇ ಕಳೆದ ಹತ್ತಾರು ವರ್ಷಗಳಿಂದಲೂ ಅಲ್ಲಿ ಕಟ್ಟಡ ಕಟ್ಟಲು ಜಪಾನು ಸಿಕ್ಕಿದರೂ ಕೂಡ ಕಟ್ಟಡವನ್ನು ಕಟ್ಟಿಲ್ಲ. ಏತಕ್ಕೆ ತಾವು ಆ ಕಟ್ಟಡವನ್ನು ಕಟ್ಟಿಲ್ಲ ಎಂಬುದನ್ನು ದಯವಿಟ್ಟು ತಿಳಿಸಬೇಕು.

**ಶ್ರೀ ಎ. ಲಕ್ಷ್ಮೀಸಾಗರ್**—ಸ್ವಾಮಿ ಅಲ್ಲಿ ಈಗ ತಕ್ಷಣ ಕಟ್ಟಡವನ್ನು ಕಟ್ಟಬೇಕಾದರೆ ಸುಮಾರು ೭,೫೨.೫೦೦ ರೂಪಾಯಿಗಳು ಬೇಕೆಂದು ತಿಳಿಸಿದ್ದಾರೆ. ಆದರೆ ಈಗ ಹಣದ ಕೊರತೆ ಇರುವುದರಿಂದ ತಕ್ಷಣ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

**ಅಧ್ಯಕ್ಷರು.**—ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲವಾದ್ದರಿಂದ ಮುಂದಕ್ಕೆ ಹಾಕಲಾಗಿದೆ.

**ಅಧ್ಯಕ್ಷರು.**—ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಬಂದಿಲ್ಲ. ಆದ್ದರಿಂದ ಇದನ್ನು ಸಹ ಮುಂದಕ್ಕೆ ಹಾಕಲಾಗಿದೆ.

## ಪಟ್ಟದಕಲ್ಲಿನಲ್ಲಿ ಉಪಹಾರ, ವಸತಿ ಹಾಗೂ ವಾಹನ ಸೌಕರ್ಯಗಳಿಲ್ಲದಿರುವುದು

೧೦೭೬. **ಶ್ರೀ ಬಿ. ಬಿ. ಚಿಮ್ಮನ ಕಟ್ಟಿ** (ಬಾದಾಮಿ)—ಪ್ರವಾಸಿ, ವಾರ್ತಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಾದಾಮಿ ತಾಲ್ಲೂಕಿನ ಸಾರಿಗೆ ಸಂಸ್ಥೆ ಡಿಪೋದಿನಲ್ಲಿ ಪ್ರತಿ ವರ್ಷ ಆಗಿರುವ ಖರ್ಚು ಎಷ್ಟು ಮತ್ತು ಬಂದಿರುವ ಲಾಭವೆಷ್ಟು ? (೧೯೮೧ ರಿಂದ ೧೯೮೪ ಜನವರಿವರೆಗೆ)

ಆ) ಪ್ರತಿವರ್ಷ ಎಷ್ಟು ಹೊಸ ಬಸ್ಸುಗಳನ್ನು ಕೊಡಲಾಗಿದೆ (೧೯೮೧ ರಿಂದ ೧೯೮೪)

ಇ) ಹೀಗಿದ್ದಾಗ್ಯೂ ಅನೇಕ ಹಳ್ಳಿಯ ಜನರು ಬಸ್ಸಿನ ಸೌಕರ್ಯ ಪಡೆಯುದಿರುವುದು ಸರಕಾರ ದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರಕಾರದವರು ಈ ಬಗ್ಗೆ ಕೈಕೊಳ್ಳುವ ಕ್ರಮವೇನು ?

**ಶ್ರೀ ಎಂ. ರಘಪತಿ.**—(ಮಾನ್ಯ ಪ್ರವಾಸಿ, ವಾರ್ತಾ ಹಾಗೂ ಪ್ರವಾಸೋದ್ಯಮ ಮಂತ್ರಿಯವರು)

| ವರ್ಷ | ಖರ್ಚು (ಲಕ್ಷ ರೂ ಗಳಲ್ಲಿ) | ಲಾಭ : ನಷ್ಟ |
|---|---|---|
| ೧೯೮೧–೮೨ | ೧೯೯.೮೦ | — ೧೦.೩೩ |
| ೧೯೮೨—೮೩ | ೧೪೨.೯೨ | — ೩.೯೩ |
| ೧೯೮೩—೮೪ | ೧೧೭.೦೧ | — ೧.೬೧ |

(ಡಿಸೆಂಬರ್ ೧೯೮೩ ರವರೆಗೆ)

| ವರ್ಷ | ಒದಗಿಸಿರುವ ಹೊಸ ಬಸ್ಸುಗಳ ಸಂಖ್ಯೆ |
|---|---|
| ೧೯೮೧—೮೨ | ೮ |
| ೧೯೮೨—೮೩ | ೨ |
| ೧೯೮೩—೮೪ | ೩ |

(ಡಿಸೆಂಬರ್ ೧೯೮೩ ರವರೆಗೆ)

ಇ) ಬಂದಿದೆ.

ಈ) ಮೋಟಾರು ವಾಹನಗಳು ಓಡಾಡುವುದಕ್ಕೆ ಹೊಗುವಂತಹ ರಸ್ತೆಗಳಿಲ್ಲದ ಕೆಲವು ಹಳ್ಳಿಗಳಿಗೆ ಬಸ್ ಸಂಚಾರವನ್ನು ಒದಗಿಸಲು ಸಾಧ್ಯವಾಗಿಲ್ಲ. ಮೋಟಾರು ವಾಹನಗಳು ಓಡಾಡುವಂತೆ ರಸ್ತೆಗಳು ಆದ ಮೇಲೆ ಈ ಹಳ್ಳಿಗಳಿಗೆ ವಾಹನ ಸೌಕರ್ಯವನ್ನು ಒದಗಿಸಲಾಗುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗಾಗಲೇ ತೃಪ್ತಿಕರ ವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಅಲ್ಲಿ ಇರುವುದಕ್ಕಾಗಿ ಕೊಠಡಿಗಳನ್ನು ಕಟ್ಟಿಸಿ ಕೊಡುವಂಥ ಒಂದು ವ್ಯವಸ್ಥೆಯನ್ನು ಆದಷ್ಟು ಬೇಗ ಮಾಡಿಸಿ ಕೊಡುತ್ತಾರೆಯೇ ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಕಡೆ ನಾಗನು ಪ್ರವಾಸ ಮಾಡಬೇಕೆಂದು ಯೋಚನೆ ಮಾಡಿದ್ದೇನೆ. ನಾನು ಅಲ್ಲಿ ಪ್ರವಾಸ ಮಾಡುವಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರನ್ನು ಸಹ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ.ಅಲ್ಲಿ ಮಾನ್ಯ ಸದಸ್ಯರಿಗೆ ಏನೇನು ಕೆಲಸ ಕಾರ್ಯಗಳು ಮಾಡಿಕೊಡಬೇಕಾಗುತ್ತದೆಯೋ ಅವುಗಳನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಬರುವಾಗ ಮಾನ್ಯಮಂತ್ರಿಗಳಾದಂಥ ಶ್ರೀಮಾನ್ ಜೇವರಾಜ ಆಳ್ವರವರನ್ನು ಸಹ ಕರೆದುಕೊಂಡು ಬರುತ್ತೇನೆ.

## ಕಾಯ್ದೆ ಹಾಗೂ ನಿಯಮಗಳನ್ನು ಕನ್ನಡಕ್ಕೂ ಭೂಶಾಂತರಿಸುವುದು

೧೦೭೬. ಶ್ರೀ ಪ್ರತಾಪಚಂದ್ರಶೆಟ್ಟಿ (ಕುಂದಾಪುರ),—ಕಾನೂನು, ಸಂಸದೀಯ ವ್ಯವಹಾರ ಗಳ ಹಾಗೂ ವಸತಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎಲ್ಲಾ ಇಲಾಖೆಯ ಕಾನೂನು ಪುಸ್ತಕಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಲಾಗಿದೆಯೇ,

ಆ) ಹಾಗಿದ್ದಲ್ಲಿ ಯಾವ ಯಾವ ಇಲಾಖೆಗಳ ಕಾನೂನು ಪುಸ್ತಕಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಲಾಗಿದೆ;

ಇ) ಎಷ್ಟು ಸಮಯದಲ್ಲಿ ಎಲ್ಲಾ ಎಲಾಖೆಯ ಕಾನೂನು ಪುಸ್ತಕಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಿಸಲಾಗುವುದು;

ಶ್ರೀ ಎ. ಲಕ್ಷ್ಮೀಸಾಗರ್. (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಮಂತ್ರಿಗಳು)—

ಅ) ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಾವಳಿಗಳನ್ನು ಕನ್ನಡಲ್ಲಿ ತರ್ಜುಮೆ ಮಾಡಲಾಗುತ್ತಿದೆ.

ಆ) ಇಲ್ಲಿಯವರೆಗೆ ತಿದ್ದುಪಡಿ ಅಧಿನಿಯಮಗಳನ್ನೊಳಗೊಂಡಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಸುಮಾರು ೩೦೦ ಅಧಿನಿಯಮಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಲಾಗಿದೆ.

ಇ) ಅಧಿನಿಯಮ ಮತ್ತು ನಿಯಮಾವಳಿಗಳನ್ನು ಆದಷ್ಟು ಬೇಗನೆ ಕನ್ನಡದಲ್ಲಿ ತರ್ಜುಮೆ ಮಾಡಲಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಬೇರೆ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಎಲ್ಲಾ ಇಲಾಖೆಯ ಕಾನೂನು ಪುಸ್ತಕಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಲಾಗಿದೆಯೆ ಎಂದು ಪ್ರಶ್ನೆ ಕೇಳಿದ್ದಾರೆ. ಎಲ್ಲಾ ಇಲಾಖೆಗಳ ಕಾನೂನು ಪುಸ್ತಕದ ಬಗ್ಗೆ ಕೇಳಿದರೆ ಅದು ಎಲ್ಲಾ ಇಲಾಖೆಗಳಿಗೂ ಸೇರಿಹೋಗುತ್ತದೆಂದು ಪ್ರಾರಂಭದಲ್ಲಿ ಹೇಳುತ್ತಾ, ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಾಳಿಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಲಾಗುತ್ತಿದೆ ಎಂದು ತಿಳಿಸುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಎಷ್ಟು ನಿಯಮಾಳಿಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಗಿದೆ ? ಎಷ್ಟು ನಿಯಮಗಳನ್ನು ತರ್ಜುಮೆ ಮಾಡಲಿಕ್ಕೆ ಇದೆ ?

ಅಧ್ಯಕ್ಷರು.—ತಮ್ಮ ಒಂದು ಪ್ರಶ್ನೆಗೆ ಉತ್ತರ ಹೇಳಿದರೆ ಎರಡನೇ ಪ್ರಶ್ನೆಗೆ ಉತ್ತರ ಸಿಗುತ್ತದೆ.